ಪ್ರಧಾನ ದಿವಾಣಿ & ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ
ಇವರ ನ್ಯಾಯಾಲಯದಲ್ಲಿ,

ಸಿ.ಸಿ.ನಂ.683/2020
ಸಿ.ಡಬ್ಲ್ಯು-2 ಪಿ.ಡಬ್ಲ್ಯು-1

| | | |
|---|---|---|
| ಸಾಕ್ಷಿದಾರರ ಹೆಸರು | : | ರಾಜಕುಮಾರ ಅಪ್ಪಣ್ಣಾ ಶಿರಗೂರ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಕಾಜಿಬೀಳಗಿ |

ದಿನಾಂಕ: 21.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯವಿಚಾರಣೆ: ಶ್ರೀ. ಸ.ಸ.ಅ ರವರಿಂದ.

ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ಆರೋಪಿತನ ವಿರುದ್ಧ ಏನು ಪ್ರಕರಣವಾಗಿದೆ ನನಗೆ ಗೊತ್ತಿಲ್ಲ. ನನ್ನ ಸ್ವಂತ ಕೆಲಸದ ನಿಮಿತ್ಯ ಸಾವಳಗಿ ಪೊಲೀಸ್ ಠಾಣೆಗೆ ಹೋದಾಗಿ ಸಾಕ್ಷಿ ಅಂತ ಹೇಳಿ ಪೊಲೀಸರು ನನ್ನ ಸಹಿ ಪಡೆದಿರುತ್ತಾರೆ. ಅದರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಈ ಹಂತದಲ್ಲಿ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಪಂಚನಾಮೆಯಾಗಿದ್ದು ಅದನ್ನು ನಿಪಿ-1 ಅಂತ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಅಂತ ಗುರುತಿಸಲಾಯಿತು.

[ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟಿಸವಾಲು ಮಾಡಲು ಅನಮತಿ ಕೋರಿದ್ದು, ಅನುಮತಿಸಲಾಯಿತು.

ಪಾಟಿಸವಾಲು: ಶ್ರೀ. ಸ.ಸ.ಅ. ರವರಿಂದ

ದಿ: 24.03.2020 ರಂದು 2-05 ಗಂಟೆಗೆ ನಾನು ಮತ್ತು ಚಾಸಾ-3 ರವರು ಸಾವಳಗಿ ಬಸ್ಸ ನಿಲ್ದಾಣದ ಹತ್ತಿರ ನಿಂತಿದ್ದಾಗ ಚಾಸಾ-1 ರವರು ನಮ್ಮನ್ನು ಪಂಚರನ್ನಾಗಿ ಬರಮಾಡಿಕೊಂಡು ಸಾವಳಗಿ ಗ್ರಾಮದ ತುಂಗಳ ರೋಡನ ಬಾಜು ಐ.ಬಿ. ರೋಡನ ಹತ್ತಿರ 2-20 ಗಂಟೆಗೆ ಹೋಗಿ ಸ್ವಲ್ಪ ದೂರದಲ್ಲಿ ನಿಂತು ವಾಚ್ ಮಾಡಲಾಗಿ ಅಲ್ಲಿ ಒಬ್ಬ ವ್ಯಕ್ತಿ ಒಂದು ರಟ್ಟಿನ ಬಾಕ್ಸನಲ್ಲಿ ಸಾರಾಯಿ ಇಟ್ಟುಕೊಂಡು ಅಕ್ರಮವಾಗಿ ಮಾರಾಟ ಮಾಡುತ್ತಿದ್ದದ್ದನ್ನು ಖಚಿತಪಡಿಸಿಕೊಂಡು ನಮ್ಮ ಸಮಕ್ಷಮ ಆತನನ್ನು ಹಿಡಿದು ವಿಚಾರಿಸಲಾಗಿ ಆತನ ಹೆಸರು ಸಚಿನ ಮಹಾದೇವ ಕಲಾದಗಿ ಅಂತ ತಿಳಿಸಿದ್ದು, ಆತನ ಹತ್ತಿರ ಇದ್ದ ರಟ್ಟಿನ ಬಾಕ್ಸನ್ನು ಪರಿಶಿಲಿಸಲಾಗಿ ಪಾರ್ಮಸ್ ಮಾಲ್ಟ ವಿಸ್ಕಿ ಕಂಪನಿಯ 90 ಎಮ್.ಎಲ್. 23 ಪೌಚಗಳು, ಪಾರ್ಮಸ್ XXX ರಮ್ ಕಂಪನಿಯ 180 ಎಮ್.ಎಲ್.ನ 4 ಪೌಚಗಳು ಇದ್ದವು.

ಅವುಗಳನ್ನು ನಮ್ಮ ಸಮಕ್ಷಮ 2-30 ರಿಂದ 3-30 ರವರೆಗೆ ಪಂಚನಾಮೆ ಮಾಡುವ ಮೂಲಕ ಅಮಾನತ್ತುಪಡಿಸಿಕೊಂಡು ಸದರಿ ಮಧ್ಯದಿಂದ ತಲಾ ಒಂದರಂತೆ ಶ್ಯಾಂಪಲ ಕುರಿತು ಪ್ರತ್ಯೇಕ ತೆಗೆದು ಅವುಗಳ ಮೇಲೆ ನಾವು ಸಹಿ ಮಾಡಿದ ಚೀಟಿಯನ್ನು ಅಂಟಿಸಿರುತ್ತಾರೆಂದು ಸೂಚಿಸುವುದು ಸರಿಯಲ್ಲ.

ನಿಪಿ-1 ರಲ್ಲಿನ ಎಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಪಾಟಿಸವಾಲು: ಶ್ರೀ.ವಿ.ಕೆ.ಎಲ್. ವಕೀಲರಿಂದ ಆರೋಪಿ ಪರವಾಗಿ</u>
ಯಾವುದೇ ಪಾಟಿಸವಾಲು ಇಲ್ಲವೆಂದು ತಿಳಿಸುತ್ತಾರೆ.

<u>ಮರುವಿಚಾರಣೆ: ಇಲ್ಲ.</u>

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]

ಓ.ಹೇ.ಕೇ.ಸರಿ ಇದೆ.

ಸಹಿ/-
ಪ್ರಧಾನ ದಿವಾಣಿ ನ್ಯಾಯಾಧೀಶರು,
ಜಮಖಂಡಿ.